ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಜುಲೈ 14, 2015

## ಹೆಸರಾಂತ ಚಲನಚಿತ್ರ ಸಂಗೀತ ನಿರ್ದೇಶಕ
## ಎಂ. ಎಸ್. ವಿಶ್ವನಾಥನ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

**ಬೆಂಗಳೂರು, ಜುಲೈ 14:**

ಹೆಸರಾಂತ ಚಲನಚಿತ್ರ ಸಂಗೀತ ನಿರ್ದೇಶಕ ಶ್ರೀ ಎಂ. ಎಸ್. ವಿಶ್ವನಾಥನ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕಳೆದ ಆರು ದಶಕಗಳಲ್ಲಿ ಕನ್ನಡ ಭಾಷೆಯೂ ಸೇರಿದಂತೆ ದಕ್ಷಿಣ ಭಾರತದ ಎಲ್ಲಾ ಭಾಷೆಗಳ 1200 ಕ್ಕೂ ಹೆಚ್ಚು ಚಿತ್ರಗಳಿಗೆ ರಾಗ ಸಂಯೋಜನೆ ಮಾಡಿದ ಶ್ರೀ ವಿಶ್ವನಾಥನ್ ಅವರು ಯಶಸ್ವೀ ಸಂಗೀತ ನಿರ್ದೇಶಕರನ್ನು ಹುಟ್ಟುಹಾಕಿ, ಸಂಗೀತ ಬ್ರಹ್ಮ ಎನಿಸಿದ್ದರು.

ಟಿ. ಕೆ. ರಾಮಮೂರ್ತಿ ಅವರೊಂದಿಗೆ ಎಂ. ಎಸ್. ವಿಶ್ವನಾಥನ್ ಅವರು ರಾಗ ಸಂಯೋಜಿಸಿದ *ವಿಜಯನಗರ ವೀರಪುತ್ರ* ಚಿತ್ರದ *ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು... ಕರ್ನಾಟಕವಿದುವೆ ನೃತ್ಯ ಶಿಲ್ಪ ಕಲೆಯ ಬೀಡಿದು...* ಪಿ. ಬಿ. ಶ್ರೀನಿವಾಸ್ ಅವರ ಕಂಠ ಸಿರಿಯಲ್ಲಿ ಹೊರಹೊಮ್ಮಿದ ಎಂದೂ ಮರೆಯದ ಹಾಡುಗಳಲ್ಲೊಂದಾಗಿದೆ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*********

ಡಿ ಪಿ ಎಂ